ಪೂರ್ವಕ್ಕೆ.—ಇಸಲಾಪುರ ಗ್ರಾಮದ ಸರ್ವೆ ನಂಬರು 19ನೆ ಜಮ್ಮಿ ಲಾಗಾಯಿತ್ತು ತಿವಪ್ಪೊಗ್ಗಾದಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಇರುವ ಗಡಿಕಲ್ಲಿನಬಳಿ ಸದರಿ ರಸ್ತೆಯನ್ನುದಾಟಿ 26, 25, 24, 21ನೆ ಸರ್ವೆ ನಂಬರು ಜಮ್ಮಿಗಳ ಮಾರ್ಗವಾಗಿ ಹಳೇ ಡಿಸ್ಟ್ರಿಲೇರಿ ಕಟ್ಟಡದ ವರಿಗೆ ಬಂದು ಅಲ್ಲಿಂದ ತುಂಗಾ ನದಿ ಸೇತುವೆಯ ಪಶ್ಚಿಮ ದಿಕ್ಕಿನ ತುದಿ ವರಿಗೆ ಹೋಗಿ ಅಲ್ಲಿಂದ ಆಕ್ಟ್ರಾಯಿ ಕಟ್ಟೆ ಮುಂಭಾಗದಲ್ಲಿ ತಿರುಗಿ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋವ್ಯುಯ್ಯನವರ ಕೆರೆ ಏರಿ ಮೇಲೆ ಹಾದು (1ನೆ ಕ್ಲಾಸಿನಲ್ಲಿ ನಮೂದು ಮಾಡಿರುವ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮ್ಮಿಬಳಿ) ಹೊನ್ನಾಳಿ ರಸ್ತೆಕ್ಕೂಡುವ ಸ್ಥಳದಲ್ಲಿ ಇರುವ ಆಕ್ಟ್ರಾಯಿ ಕಟ್ಟೆವರಿಗೆ.

ಪಶ್ಚಿಮಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತ್ತು ಹೋದಿಗ್ಗೆರೆ ಮುರಿಗೇಂದ್ರಪ್ಪನ ಬಂಗಲೆಯನ್ನು ಬಳಿಗೊಂಡು ಸದರಿ ರಸ್ತೆ ಮಾರ್ಗವಾಗಿ ದಕ್ಷಿಣಕ್ಕೆ ಸಿಲ್ವೇದಾರ ಲಾಯ ಮತ್ತು ಲೈನಗಳು ಮತ್ತು ಮಿಳ್ಳಗಟ್ಟ ಗ್ರಾಮದ 113, 114ನೆ ಸರ್ವೆ ನಂಬರು ಜಮ್ಮಿಗಳನ್ನು ಬಳಿಗೊಂಡು ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಬಳಿ ತುಂಗಾನದಿ ವರಿಗೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇನ್ಸ್ತಿ ಹಾರ್‌ನಾಮೆ.

ತಾರೀಖು 3ನೆ ಏಪ್ರೆಲ್ 1907ನೆ ಇಸವಿ, ಚಿಕ್ಕಮಗಳೂರು.

ಸ್ವ॥ 1901ನೆ ಇಸವಿ ಡಿಸೆಂಬರು 11ನೆ ಮರ್ತ್ಯಂ ನಂಬರು 9,007—ಲೆ. ಜೆ. 56ನೆ ಗವರ್ನ್‌ಮೆಂಟು ನೋಟಿಫಿಕೇಷನ್ 5ನೆ ಪ್ಯಾರಾ ವೇರಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸ್ವ॥ 1907ನೆ ಸಾಲ್ ಏಪ್ರೆಲ್ 1ನೆ ತಾರೀಖು ಲಾಗಾಯಿತು ಸೆಪ್ಟಂಬರು 30ನೆ ತಾರೀಖು ವರಿಗೆ ಮೀನುಗಳನ್ನು ಹಿಡಿಯುವುದನ್ನು ಮೋಖೂಫ್ ಮಾಡಿ ಇದೆ.

ಡಿ. ದೇವರಾಜ ಅರಸ್,
ಡೆಪ್ಯುಟಿ ಕಮಿಷನರ್.

ಸ್ವ॥ 1907ನೆ ಇಸವಿ ಏಪ್ರೆಲ್ ತಾರೀಖು 6.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1907ನೆ ಇಸವಿ ಜುಲೈ ಗುರೆ ಲಾಗಾಯಿತು 1908ನೆ ಇಸವಿ ಜೂನ್ ಆಖೈರ ವರಿಗೆ 1 ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇದರಡಿ ಕಾಣಿಸಿರುವ ಟೋಲು ಗೇಟುಗಳಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲು ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ನಂಬರು.	ಟೋಲ್‌ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡೆಯುವ ಸ್ಥಳ.
1	ತಡಸ (ಭದ್ರಾನದಿಯ ಸೇತುವೆ)	18ನೆ ಮೇ 1907 ...	ಎಡೇಹಳ್ಳಿ ಸಬ್ ತಾಲ್ಲೂಕು ಕಛೇರಿಯಲ್ಲಿ.
2	ಹರಿಹರಪುರ (ತುಂಗಾನದಿ ಸೇತುವೆ) ...	20ನೆ ಡಿಟ್ಟೋ ...	ಕೊಪ್ಪದ ತಾಲ್ಲೂಕು ಕಛೇರಿಯಲ್ಲಿ.
3	ಬಾಳೆಹೊನ್ನೂರು (ಭದ್ರಾನದಿ ಸೇತುವೆ)	23ನೆ ಡಿಟ್ಟೋ	ಬಾಳೆಹೊನ್ನೂರು ಮುಸಾಫರ್ ಬಂಗಲೆಯಲ್ಲಿ.

2. ಎಲ್ಲಾ ಸವಾಲುಗಳಿಂತಲೂ ಜಾಸ್ತಿ ಯಾದ ಛಡ ದರಖಾಸ್ತು ಸಂಯಾಗಿ ಕಂಡುಬಂದಲ್ಲಿ ಗವರ್ನ್‌ಮೆಂಟಿ ವ್ಯಾಜ್ಯಾರಿಗೆ ಬಳಿಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದ್ದನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳ್ಳವರಾಗಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಮೂರನ್ನೇ ಬಾಗ ಅಂಕ್ಷ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಸಲ್ಪಟ್ಟ ಗವರ್ನ್‌ಮೆಂಟ್ ಆರ್ಡರ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಬಂದರ ಬಂದಾಣಿಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನ್‌ಮೆಂಟಿನಿಂದ ಹರಾಜು ವ್ಯಾಜ್ಯಾರಾಗಿ ಬಂದವರಿಂದ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹಿತ ಸದರಿ ಟೋಲ್ ಗೇಟು ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಖಜಾನೆಗೆ 1907ನೆ ಆಗಸ್ಟು ತಾರೀಖು 10ರ ಲಾಗಾಯಿತು ಸಮಾನಾದ ಎಂಟು ಖಿಸ್ತು ಗಳಾಗಿ ಪ್ರತಿ ತಿಂಗಳ 10ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು 9—10—11—12ನೆ ಖಿಸ್ತು ಗಳಿಗೆ ಜಮೆ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೆವಾರ ಖಿಸ್ತು ನ್ಯೂಟೀಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ವ್ಯಾಜ್ಯಾರು ಸಂಪೂರ್ಣ ತಿ

ತಿಳಿದ ತಾರೀಖು ಲಾಗಾಯಿತು ಹೊಸೆಯ ಟೆಪಸಿಲ ಬಳಗೆ ಅವಶ್ಯಕವಿರುವ ಕರಾರನ್ನು ಭಾಷಾಂತರಗೆದಲ್ಲಿ ಬರೆದುಕೊಡಬೇಕು. ತೇವಣಿ ಇಡದೇ ಇದ್ದರೆ ಅಥವಾ ಜಾಮೀನು ಕೊಡದೇ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ ಮತ್ತು ಸದರಿ ಕಂಟ್ರಾಕ್ಟು ಎರಡನೇ ಸರಾಜು ಮಾಡಲ್ಪಡುವದು. ಹೀಗೆ ಮಾಡಿದ್ದರಲ್ಲಿ ಸರಕಾರಕ್ಕೆ ಲುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನುದಾರರ ಜೆಂದಿಗೆ ಹರಾಜು ಮಾಡಿನ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಬಂದಕ್ಕೆ ಸೇಕಡ ಆರು ರೂಪಾಯಿ ಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ ಬೆಂದಕ್ಕೆ ಬೆಂದಾಲೆಯಂತೆ ಲೋಕಲ್ ಸೆಸ್ಸು ಕೊಡಲಿಕ್ಕೆ ಬದ್ಧನಾಗಿರುತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನುದಾರಿಂದ ಬಾಕಿ ಮೊಬಲಗು ಬಾರದೇ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಕ್ಕುವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಕ್ಕುವು ಡೆಪ್ಯೂಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕು ಅಥವಾ ಸಬ್ ತಾಲ್ಲೂಕಿನಲ್ಲಿದ್ದಯೋ ಆಯಾ ತಾಲ್ಲೂಕು ಅಮಲ್ದಾರ್ರ ಅಥವಾ ಸಬ್ ತಾಲ್ಲೂಕು ಅಮಲ್ದಾರ್ರ ಡೆಪ್ಯುಟಿ ಅಮಲ್ದಾರ್ರ ತನಿಖೆಗೆ ಒಳಗಾಗಿ ಇರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದು ಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತಪ್ಪು ಪ್ರಾಸಿಕ್ಯೂಷನ್‌ಗೆ ಗುರಿಪಡಿಸುತ್ತೆ.

9. ದಂಡು, ಮಿಲಿಟೆರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿ ಮೇಲೆ ಪ್ರಯಾಣ ಮಾಡುವ ಪೋಲೀಸು ಥಾ ಇತರ ಉದ್ಯೋಗಸ್ಥರ ಸರ್ಕಾರದ ಸಾಮಾನುಗಳು ಅಂದರೆ, ಸಂಬಂಧಪಟ್ಟ ಇಲಾಖಾ ಮೊಜೆಸ್ತರರ ಸರಟಿಫಿಕೇಟು ನಿಶಿ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಬಂದು ದೊಡ್ಡ ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರದು ಟೋಲ್ ಗೇಟು ಬಳಿ ಚನ್ನಾಗಿ ಕಾಣುವ ಜಾಗದಲ್ಲಿ ತಗಲುಹಾಕಬೇಕು.

11. ಗವರ್ನ್‌ಮೆಂಟಿನಿಂದ ನೇಮಿಸಲ್ಪಟ್ಟ ಟೋಲ್ ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

12. ಇನ್ನೂ ಹೆಚ್ಚಿನ ಅಂಶವೇನಾದರೂ ತಿಳಿಯಬೇಕಾದಲ್ಲಿ ಹಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಬಾಳೆಹೊನ್ನೂರು-ಹಡಸ, ಹರಿಹರಪ್ಪುರದ ಸೇತುವೆಗಳ ಮೇಲೆ ಇರುವ ಟೋಲ್ ಗೇಟುಗಳ ಬಳಿ ಸುಂಕ ವಸೂಲ್ಮಾಡುವ ದರಗಳ ಪಟ್ಟಿ :—

ನಂಬರು	ತಪಸೀಲು.	ಭರ್ತಿ ಆಗಿದ್ದರೆ.	ಖಾಲಿ ಇದ್ದರೆ.
		ರೂ. ಆ. ಪೈ.	ರೂ. ಆ. ಪೈ.
1	ನಾಲ್ಕು ಚಕ್ರದ ಗಾಡಿ 1ಕ್ಕೆ ...	0 8 0	0 8 0
2	ಎಡು ಚಕ್ರದ ಪೆಟ್ಟಿಗೆ ಗಾಡಿ ಅಥವಾ ಭಂಡಿ 1ಕ್ಕೆ	0 4 0	0 4 0
3	ಎತ್ತುಗಳು, ಎತ್ತುಗಳು ದಾರು 1ಕ್ಕೆ	0 0 6	0 0 3
4	ಆನೆ 1ಕ್ಕೆ	1 0 0	1 0 0
5	ಒಂಟೆ 1ಕ್ಕೆ	0 8 0	0 8 0
6	ಪ್ರತಿ ಕುದುರೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0 1 0	...
7	ಡಿಟೋ ಹೊರೆ ಇಲ್ಲದು ಅಥವಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	..	0 1 0
8	ಪ್ರತಿ ಕತ್ತೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0 0 6	..

ನೋಟು.—ನಡದು ಬರುವ ಮನುಷ್ಯರ ಮೇಲೆ ಟೋಲ್ ವಸೂಲು ಮಾಡತಕ್ಕದ್ದಿಲ್ಲ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡೆಪ್ಯುಟಿ ಕಮಿಷನರ್.